IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಕೊಪ್ಪಳ ಪರಿಸರದ ನವಶೋಧಿತ ಬೃಹತ್ ಶಿಲಾಯುಗದ ನೆಲೆಗಳು

**ಡಾ. ನಾಗೇಶ ಹೆಚ್.ಎ.**
ಉಪನ್ಯಾಸಕರು
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ
ಶಂಕರಘಟ್ಟ–577451

ಕೊಪ್ಪಳ ಪರಿಸರವು ಪ್ರಾಚೀನ ಕಾಲದಿಂದಲೂ ಆದಿಮಾನವನ ವಾಸನೆಲೆಯಾಗಿದ್ದು, ಭೌಗೋಳಿಕವಾಗಿ ವಿಶಾಲವಾದ ಬಯಲು ಪ್ರದೇಶ ಮತ್ತು ಬೆಟ್ಟಗುಡ್ಡಗಳಿಂದ ಕೂಡಿದೆ. ಈ ಪರಿಸರಕ್ಕೆ ಪೂರಕವಾಗಿಯೇ ಆದಿಮಾನವನು ವಾಸಿಸಿರುವ ಹಲವಾರು ಶಿಲಾಯುಗದ ನೆಲೆಗಳು ಕಂಡುಬರುತ್ತವೆ. ಇಲ್ಲಿ ಕಂಡುಬರುವ ಗವಿವರ್ಣಚಿತ್ರಗಳ ನೆಲೆಗಳ ಸುತ್ತಮುತ್ತ ದೊರೆಯುವ ಶಿಲಾಯುಧಗಳು, ಮಡಿಕೆಚೂರುಗಳು ಮೊದಲಾದ ಪುರಾತತ್ವ ಆಕರಗಳಿಂದ ಸೂಕ್ಷ್ಮಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಹಾಗೂ ಆದಿಇತಿಹಾಸ ಕಾಲದ ಸಂಸ್ಕೃತಿಗಳು ಅಸ್ತಿತ್ವದಲ್ಲಿದ್ದ ಬಗ್ಗೆ ಕುರುಹುಗಳಿವೆ.[1] ಈ ಪರಿಸರವು ಸಣ್ಣಸಣ್ಣ ಕುರುಚಲು ಗಿಡಗಳಂತಹ ಸ್ವಾಭಾವಿಕ ಸಸ್ಯವರ್ಗವನ್ನು ಹೊಂದಿದೆ.[2] ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಕಲೆಯ ಶೋಧನೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಡಾ. ಅ ಸುಂದರ ಅವರ ಕೊಡುಗೆ ಅಪೂರ್ವವಾಗಿದ್ದು, ಈ ಪರಿಸರದಲ್ಲಿನ ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅಲ್ಲದೆ ಕೊಪ್ಪಳ ಜಿಲ್ಲಾ ಪರಿಸರದ ಗವಿಚಿತ್ರಗಳನ್ನು ಎಂ.ಎಸ್ ಕೃಷ್ಣಮೂರ್ತಿ, ವಿ.ಎಸ್ ನರಸಿಂಹನ್ ಹಾಗೂ ಶರಣಬಸಪ್ಪ ಕೋಲ್ಕರ್ ಅವರು ಶೋಧಿಸಿ ಅಧ್ಯಯನ ಮಾಡಿದ್ದಾರೆ. ಸೂಕ್ಷ್ಮಶಿಲಾಯುಗದ ಸಂಸ್ಕೃತಿಯ ಉಪಕರಣಗಳು ಚಾಲ್ಸಿಡನಿ(ಬೆಣಚುಕಲ್ಲು)ಯ ಮೊನೆಗಳು, ಲೂನೆಟ್‌ಗಳು, ಟ್ರೇಪೇಜ್‌ಗಳು, ಅರೆಪ್ರಶಸ್ತ ಶಿಲೆಗಳಾದ ಕ್ವಾರ್ಟ್ಜ್ ಮತ್ತು ಅಗೆಟ್‌ಗಳ ಅಲಗುಗಳು ದೊರಕುತ್ತವೆ.[3] ನವಶಿಲಾಯುಗ ಸಂಸ್ಕೃತಿಯ ಉಜ್ಜಿ ನಯಗೊಳಿಸಿದ ಕೈಕೊಡಲಿ, ಸುಟ್ಟ ಮಣ್ಣಿನ ಬೂದುಬಣ್ಣದ ಮೃತಪಾತ್ರೆಗಳು ಮತ್ತು ಜನರು ನದಿತೀರದ ಫಲವತ್ತಾದ ಭೂಮಿಯಲ್ಲಿ ನೆಲೆಸುವಿಕೆಯು ಕಂಡುಬರುತ್ತದೆ. ಕಬ್ಬಿಣಯುಗದ ಬೃಹತ್ ಶಿಲಾಸಂಸ್ಕೃತಿಯ ಜನರು ಕಪ್ಪು ಮತ್ತು ಕೆಂಪು ಹಾಗೂ ಹೊಳಪಿನಿಂದ ಕೂಡಿದ ಮಣ್ಣಿನ ಮಡಿಕೆಗಳನ್ನು ಉಪಯೋಗಿಸುತ್ತಿದ್ದರು. ಇವರು ನೂತನ ಶಿಲಾಯುಗದ ಜನರಂತೆ ಬಂಡೆಗಳ ಕಲ್ಲಾಸರೆಗಳು ಮತ್ತು ಗವಿಗಳಲ್ಲಿ ಸ್ಥಳೀಯವಾಗಿ ಸಿಗುವ ವರ್ಣಗಳನ್ನು ಬಳಸಿಕೊಂಡು ಚಿತ್ರಗಳನ್ನು ಬರೆಯುತ್ತಿದ್ದರು. ಈ ಚಿತ್ರಗಳಲ್ಲಿ ಮುಖ್ಯವಾಗಿ ಕುದುರೆ ಸವಾರರ ಚಿತ್ರ, ಗುಂಪು ಕುಣಿತದ ದೃಶ್ಯ, ಸಾಕುಪ್ರಾಣಿಗಳು ಹಾಗೂ ಬೇಟೆಯಾಡುವ ಚಿತ್ರಗಳನ್ನು ಪ್ರಮುಖವಾಗಿ ಕಾಣಬಹುದು. ಇಲ್ಲಿ ಚಿತ್ರಗಳನ್ನು ಬಿಡಿಸಲು ಮುಖ್ಯವಾಗಿ ಕೆಂಪು ವರ್ಣವನ್ನು ಉಪಯೋಗಿಸಲಾಗಿದೆ.[4] ಈ ಚಿತ್ರಗಳ ಪ್ರಾಚೀನತೆ ಮತ್ತು ನಿರ್ದಿಷ್ಟವಾದ ಕಾಲಮಾನವನ್ನು ತಿಳಿಸುವುದು ಸ್ವಲ್ಪ ಕಠಿಣವಾಗಿ ತೋರುತ್ತದೆ. ಆದರೂ ಸಹ ಇಲ್ಲಿ ದೊರೆಯುವಂತಹ ಪ್ರಾಚ್ಯಾವಶೇಷಗಳ ಅಧ್ಯಯನದಿಂದ ಈ ನೆಲೆಗಳ ಕಾಲಮಾನವು ನವಶೀಲಾಯುಗದ ಅಂತ್ಯದಿಂದ ಬೃಹತ್ ಶಿಲಾಯುಗವನ್ನು ಒಳಗೊಂಡಂತೆ ಆರಂಭಿಕ ಇತಿಹಾಸ ಕಾಲವನ್ನು ಸಹ ಗುರ್ತಿಸಬಹುದು.

ಕೊಪ್ಪಳ ಪ್ರದೇಶದಲ್ಲಿ ಕ್ರಿ.ಪೂ 4–3ನೇ ಶತಮಾನದ ಹೊತ್ತಿಗೆ ಮೌರ್ಯ ಸಾಮ್ರಾಜ್ಯದ ಆಳ್ವಿಕೆಯನ್ನು ಕಾಣಬಹುದು. ಇದಕ್ಕೆ ಸಾಕ್ಷಿಯಾಗಿ ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡುಗಳಲ್ಲಿ ದೊರೆತ ಅಶೋಕನ ಶಿಲಾಶಾಸನಗಳಿಂದ ಇತಿಹಾಸ ಕಾಲದ ಸಂಸ್ಕೃತಿಯ ಆರಂಭವನ್ನು ತಿಳಿಯಬಹುದು. ಈ ಪ್ರದೇಶದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಸಹ ಮತ್ತಷ್ಟು ಹೊಸಹೊಸ ನೆಲೆಗಳು ಬೆಳಕಿಗೆ ಬರುತ್ತಿವೆ. ಅವುಗಳಲ್ಲಿ ದನಕಲ್‌ಗುಡ್ಡ, ಗುನ್ನಳ್ಳಿ ಮತ್ತು ಹಿರೆಸಿಂದೋಗಿಯ ನಡುವಿನ

ಹಿರೇಗುಡ್ಡ ಮತ್ತು ಚುಕ್ಕನಕಲ್ಲು ಪರಿಸರಗಳು ಪ್ರಮುಖವಾದವು. ವಿಪರ್ಯಾಸವೆಂದರೆ ಸ್ಥಳೀಯರಲ್ಲಿ ಈ ನೆಲೆಗಳ ಕುರಿತು ಮಾಹಿತಿಯ ಜೊತೆಗೆ ಐತಿಹಾಸಿಕ ಪ್ರಜ್ಞೆಯ ಕೊರತೆಯಿದೆ.

**ದನಕಲ್ ಗುಡ್ಡ :** ಮಳೆಮಲ್ಲಪ್ಪ ಗುಡ್ಡದ ಶ್ರೇಣಿಯ ದಕ್ಷಿಣ ಭಾಗಕ್ಕಿರುವ ದನಕಲ್ ಗುಡ್ಡವು ಕೂಡ ಮಳೆಮಲ್ಲಪ್ಪ ಗುಡ್ಡದ ಪರಿಸರಕ್ಕೆ ಹೊಂದಿಕೊಂಡಿದೆ. ಇದು ಕೂಡ ಆದಿಮಾನವನ ಆವಾಸ ನೆಲೆಯಾಗಿದೆ. ಈ ಗುಡ್ಡದ ಉತ್ತರ ದಿಕ್ಕಿಗೆ ಇರುವ ದೊಡ್ಡ ಕಲ್ಲಾಸರೆಯಲಿ ಅತಿಹೆಚ್ಚು ದನಗಳ ಚಿತ್ರಗಳನ್ನು ಬಿಡಿಸಿರುವುದರಿಂದ ಈ ಗುಡ್ಡಕ್ಕೆ ದನಕಲ್‌ಗುಡ್ಡ ಎಂದು ಸ್ಥಳೀಯರು ಕರೆಯುತ್ತಾರೆ. ಈ ಕಲ್ಲಾಸರೆಯಲ್ಲಿನ ಚಿತ್ರಗಳು ಕೆಂಪು ಮತ್ತು ಬಿಳಿಯ ಬಣ್ಣದಲ್ಲಿ ರಚನೆಯಾಗಿವೆ. ದನದ ಚಿತ್ರಗಳು ಸುಮಾರು ಮೂರುವರೆ ಸೆಂಟಿಮೀಟರ್ ಉದ್ದ ಮತ್ತು ಎರಡೂವರೆ ಸೆಂಟಿಮೀಟರ್ ಎತ್ತರವಾಗಿವೆ. ಈ ದನಗಳು ಎತ್ತರದ ಡುಬ್ಬವನ್ನು ಹೊಂದಿದ್ದು ಕೊಂಬುಗಳ ನಡುವಿನ ಅಂತರವನ್ನು ಅಗಲವಾಗಿರುವಂತೆ ಚಿತ್ರಿಸಲಾಗಿದೆ. ಕೋಡುಗಳು ದಪ್ಪವಾಗಿಯೂ ಮತ್ತು ಬಲಿಷ್ಠವಾದ ದೇಹಗಳನ್ನು ಹೊಂದಿವೆ. ಇದು ಅಂದಿನ ಪಶುಗಳ ದೈಹಿಕ ಆಕಾರವನ್ನು ತಿಳಿಸುತ್ತದೆ. ಇಂದಿಗೂ ಕೂಡ ಗುನ್ನಳ್ಳಿ ಗ್ರಾಮದ ಪಶುಗಳು ಇದೇ ಸಂತತಿಯವೆಂದು ಊಹಿಸಬಹುದಾಗಿದೆ. ಅವುಗಳ ಮುಂದುವರಿದ ತಳಿಗಳನ್ನು ಇಂದಿಗೂ ಕೂಡ ಆ ಪ್ರದೇಶದ ಸುತ್ತಮುತ್ತಲೂ ಗಮನಿಸಬಹುದಾಗಿದೆ. ಅಲ್ಲದೆ ಈ ಗುಡ್ಡದ ತುದಿಯಲ್ಲಿರುವ ಕಲ್ಲಾಸರೆಯಲ್ಲಿ ಜಿಂಕೆಗಳು, ನವಿಲು, ಚಕ್ರ ಮತ್ತು ನೃತ್ಯಮಾಡುತ್ತಿರುವ ಮಾನವನ ಚಿತ್ರಗಳಿವೆ. ಈ ಚಿತ್ರಗಳು ಸುಮಾರು ನಾಲ್ಕು ಇಂಚು ಅಗಲದಿಂದ ಸುಮಾರು ಒಂದು ಅಡಿಗಳಷ್ಟು ದೊಡ್ಡದಾಗಿವೆ. ಈ ಚಿತ್ರಗಳು ಕೂಡ ವಾತಾವರಣದ ಪ್ರಭಾವದಿಂದಾಗಿ ಹಾಳಾಗುವ ಹಂತಕ್ಕೆ ತಲುಪಿವೆ. ಬಹುಶಃ ಈ ಮೇಲಿನ ಕಲ್ಲಾಸರೆಯ ಚಿತ್ರಗಳು ನವಶಿಲಾಯುಗದ ಕಾಲದಲ್ಲಿ ರಚನೆಯಾಗಿರಬಹುದು. ಗುಡ್ಡದ ದಕ್ಷಿಣ ದಿಕ್ಕಿಗೆ ಎರಡುವರೆ ಅಡಿ ಎತ್ತರವಾದ ಒಂದು ಸಣ್ಣಗುಹೆಯಿದೆ. ಈ ಗುಹೆಯ ತ್ರಿಭುಜಾಕಾರದ ರಚನೆಯನ್ನು ಹೊಂದಿದ್ದು ಅದರ ಎರಡೂ ಭಾಗದ ಮೇಲ್ಛಾವಣಿಯಲ್ಲಿನ ಗೋಡೆಯಿಂದ ಅಡ್ಡಲಾಗಿ ದೊಡ್ಡ ಗೆರೆಯನ್ನು ಎಳೆದಿದ್ದು ಅದರಿಂದ ಕೆಳಕ್ಕೆ ಬಾಣದ ಆಕಾರದಲ್ಲಿ ತೋರಣದ ರೀತಿಯಲ್ಲಿ ಇಳಿಬಿಟ್ಟಿರುವಂತೆ ರಚಿಸಲಾಗಿದೆ. ಅಲ್ಲದೆ ಈ ಗುಡ್ಡದ ಉತ್ತರಕ್ಕೆ ಸುಮಾರು 250 ಮೀಟರ್ ದೂರದಲ್ಲಿ ದನಗಳ ಸಗಣಿಯನ್ನು ಸುಟ್ಟಿರುವ ಅವಶೇಷವು ಕಂಡುಬರುತ್ತದೆ. ಈ ಬೂದಿಯ ಅವಶೇಷವು ಇಂದು ಕೃಷಿ ಚಟುವಟಿಕೆಯ ಕಾರಣದಿಂದ ನಾಶವಾಗಿರುವುದನ್ನು ಕಾಣಬಹುದು.

**ಹಿರೇಗುಡ್ಡ** : ಹಿರೇಗುಡ್ಡವು ಕೊಪ್ಪಳ ತಾಲೂಕು ಕೇಂದ್ರದಿಂದ ಸುಮಾರು 6ಕಿ.ಮೀ ನೈರುತ್ಯ ದಿಕ್ಕಿಗೆ ಗುನ್ನಳ್ಳಿ ಮತ್ತು ಚಿಕ್ಕಸಿಂದೋಗಿ ಗ್ರಾಮಗಳ ಮಧ್ಯಭಾಗದಲ್ಲಿದೆ. ಈ ಗುಡ್ಡವು ಸಹ ಮಳೆಮಲ್ಲಪಗುಡ್ಡ ಶ್ರೇಣಿಯ ಸಮೀಪವೇ ಇರುವುದರಿಂದ ಇದು ಸೂಕ್ಷ್ಮಶಿಲಾಯುಗದಿಂದ ಆದಿಇತಿಹಾಸ ಕಾಲದವರೆಗಿನ ಪ್ರಾಚೀನ ನೆಲೆಯಾಗಿದೆ. ಈ ಗುಡ್ಡದಲ್ಲಿ ಗಿಡಮೂಲಿಕೆಗಳು ಇಲ್ಲಿ ಹೇರಳವಾಗಿ ದೊರೆಯುವುದರಿಂದ ಹಿರೇಮದ್ದಿನ ಗುಡ್ಡ[5] ಎಂದು ಕರೆಯಲಾಗುತ್ತದೆ. ಸ್ಥಳೀಯರು ಕಪ್ಪತ್ತಗುಡ್ಡದಲ್ಲಿ ದೊರೆಯದಿರುವ ಗಿಡಮೂಲಿಕೆಗಳು ಇಲ್ಲಿ ದೊರೆಯುತ್ತವೆಂದು ಹೇಳುತ್ತಾರೆ.[6] ಹಿರೇಗುಡ್ಡವು ಅನೇಕ ಪುರಾತತ್ವ ಆಕರಗಳನ್ನು ಹೊಂದಿರುವ ಪ್ರಾಚೀನ ನೆಲೆಯಾಗಿದೆ. ಈ ನೆಲೆಯ ಪಶ್ಚಿಮ ಭಾಗಕ್ಕೆ ಹಿರೇಹೊಳೆಯೆಂಬ ಸ್ವಾಭಾವಿಕ ನೀರಿನ ಮೂಲವಿರುವುದರಿಂದ ಸೂಕ್ಷ್ಮಶಿಲಾಯುಗದಿಂದ ಆದಿಇತಿಹಾಸ ಕಾಲದವರೆ ವಿವಿಧ ಹಂತಗಳ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿದೆ. ಪೂರ್ವಭಾಗದಲ್ಲಿ ನವಶಿಲಾಯುಗಕ್ಕೆ ಸೇರಿದ ಎರಡು ಗುಹಾಲಯಗಳಿದ್ದು ನವಶಿಲಾಯುಗ ಜನರು ವಾಸಮಾಡಿದ ಕುರುಹುಗಳಾದ ಅರ್ಧಭಾಗ ತುಂಡಾಗಿರುವ ನವಶಿಲಾಯುಗದ ಕಲ್ಲಿನ ಕೊಡಲಿಯ ತುದಿಯಭಾಗ, ಬೂದುಬಣ್ಣದ ಮಡಿಕೆ ಚೂರುಗಳು ಹೇರಳವಾಗಿ ದೊರೆಯುತ್ತವೆ. ಪಶ್ಚಿಮ ಭಾಗದಲ್ಲಿ ಬೃಹತ್ ಶಿಲಾಯುಗದ ಮಾನವನ ವಾಸನೆಲೆಗಳು ಮತ್ತು ಅವಶೇಷಗಳಾದ ಕಪ್ಪು ಮತ್ತು ಕೆಂಪು ಹಾಗೂ ಕೆಂಪುವರ್ಣದ ಮೃತ್ಪಾತ್ರೆಗಳು ದೊರೆಯುತ್ತವೆ. ಈ ಮಡಿಕೆಗಳು ತುಂಬಾ ನಯವಾದ ಒಳರಚನೆಯನ್ನು ಹೊಂದಿದ್ದು ಅವುಗಳನ್ನು ಉತ್ಕೃಷ್ಟವಾಗಿ ತಯಾರಿಸಲಾಗಿದೆ. ಉತ್ತರ ಭಾಗದಲ್ಲಿ ಆದಿಇತಿಹಾಸ ಕಾಲದ ಅವಶೇಷಗಳು ಮತ್ತು ರಕ್ಷಣಾ ಗೋಡೆ ಹಾಗೂ ವರ್ಣಚಿತ್ರಗಳನ್ನು ಹೊಂದಿರುವ ಕೆಂಪುವರ್ಣದ ಮಡಿಕೆಚೂರುಗಳು ದೊರೆಯುತ್ತವೆ. ಇಲ್ಲಿ ದೊರಕಿರುವ ಇಟ್ಟಿಗೆಯ ಅವಶೇಷಕ್ಕೂ ಗವಿಮಠದ ಅಶೋಕನ ಶಾಸನದ ಸಮೀಪದಲ್ಲಿ ದೊರಕಿರುವ ಇಟ್ಟಿಗೆಗಳು ಹಾಗೂ ಇತಿಹಾಸ ಕಾಲದ ಮೃತ್ಪಾತ್ರೆಗಳಿಗೂ ಸಾಮ್ಯತೆಯಿರುವುದರಿಂದ ಈ ಎರಡೂ ನೆಲೆಗಳೂ ಒಂದೇ ಕಾಲಘಟ್ಟಕ್ಕೆ ಸೇರಿದವೆಂದು ಊಹಿಸಬಹುದು. ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಬೃಹತ್ ಶಿಲಾಯುಗದ ಕೆಂಪು ಮತ್ತು ಕಪ್ಪುವರ್ಣದ ಮಡಿಕೆ ಚೂರುಗಳ ಅವಶೇಷಗಳು ದೊರೆಯುತ್ತವೆ. ಈ ಗುಡ್ಡದ ಪಶ್ಚಿಮ ದಿಕ್ಕಿಗಿರುವ ಎತ್ತರವಾದ ಬಂಡೆಯ ಕಲ್ಲಾಸರೆಯಲ್ಲಿ ಕೆಂಪು ಮತ್ತು ಬಿಳಿಯ ವರ್ಣದ ಚಿತ್ರಗಳು ಕಂಡುಬರುತ್ತವೆ. ಈ ಚಿತ್ರಗಳಲ್ಲಿ ಆನೆಗಳು, ಮಾನವರ ನೃತ್ಯ, ಬೇಟೆ, ಹಸು, ಜಿಂಕೆ ಮತ್ತು ಗೂಳಿಗಳನ್ನು ಚಿತ್ರಿಸಲಾಗಿದೆ. ಇವು ಅಂದಿನ ಮಾನವ ಮತ್ತು ಆತನ ದಿನನಿತ್ಯದ ಜೀವನವನ್ನು ಪರಿಚಯಿಸುವ ಚಿತ್ರಗಳನ್ನು ನಿರೂಪಿಸುತ್ತದೆ.

ಈ ಚಿತ್ರಗಳಲ್ಲಿ ಮಾನವನನ್ನು ತ್ರಿಕೋನಾಕಾರದಲ್ಲಿ ನೀಳವಾದ ರೇಖಾಚಿತ್ರಗಳಿಂದ ಕೆಲವೊಮ್ಮೆ ಸೂಕ್ಷ್ಮವಾದ ಸಣ್ಣರೇಖೆಗಳಿಂದಲೂ ಮತ್ತೆ ಕೆಲವನ್ನು ಮಂದವಾಗಿಯೂ ಚಿತ್ರಿಸಲಾಗಿದೆ. ವೃತ್ತವು ಕೇಂದ್ರದಿಂದ ಸುಮಾರು ಎರಡುವರೆ

ಇಂಚುಗಳಷ್ಟು ಸುತ್ತಳತೆಯನ್ನು ಹೊಂದಿದ್ದು 9 ಅರಗಳು ಮತ್ತು 9 ಚುಕ್ಕೆಗಳನ್ನು ಹೊಂದಿದೆ. ಇದು ತಂತ್ರದ ಉದ್ದೇಶದಿಂದ ಇದನ್ನು ರಚಿಸಿರಬಹುದು. ಮತ್ತೊಂದು ವೃತ್ತವು ಕೇಂದ್ರದಿಂದ ಮೂರು ಸುತ್ತುಗಳನ್ನು ಹೊಂದಿದ್ದು ಇದೂ ಕೂಡ ಮಂಡಲದ ರಚನೆಯಾಗಿರಬಹುದು. ಗುಡಿಸಲಿನ ಚಿತ್ರವು ಮನೆಯ ಪರಿಕಲ್ಪನೆಯಾಗಿದ್ದು ಚೌಕಾಕಾರವಾದ ಗೋಡೆಯ ರಚನೆ ಮತ್ತು ತ್ರಿಭುಜಾಕೃತಿಯ ಮಾಡನ್ನು ಹೊದಿಸಿರುವಂತೆ ಚಿತ್ರಿಸಲಾಗಿದೆ. ಸಮೂಹನೃತ್ಯದ ಚಿತ್ರಗಳಲ್ಲಿ ಎರಡೂ ಕೈಗಳನ್ನು ಮೇಲಕ್ಕೆತ್ತಿ ನೃತ್ಯಮಾಡುತ್ತಿರುವ ದೃಶ್ಯವು ತುಂಬಾ ಆಕರ್ಷಕವಾಗಿದ್ದು ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಗುಡಿಸಲಿನ ಚಿತ್ರದ ಎಡಭಾಗದಲ್ಲಿರುವ ಹಸುವಿನ ಚಿತ್ರವಿದ್ದು ಅದು ಉಳಿದೆಲ್ಲಾ ಚಿತ್ರಗಳಿಗಿಂತ ವಿಭಿನ್ನವಾಗಿ ಕಾಣುತ್ತದೆ. ಹಸುವಿನ ಮೇಲೆ ಸವಾರಿ ಮಾಡುತ್ತಿರುವ ಒಂದು ಕೈಯನ್ನು ಮೇಲಕ್ಕೆತ್ತಿ ಇನ್ನೊಂದು ಕೈಯಲ್ಲಿ ಹಗ್ಗವನ್ನು ಹಿಡಿದಿರುವಂತೆ ತೋರಿಸಲಾಗಿದೆ. ಇದರ ಬಲಭಾಗದಲ್ಲಿ ಮೂರು ಆನೆಗಳ ಸಾಲನ್ನು ಒಂದೇ ಸಮಾನಾಂತರವಾಗಿರುವಂತೆ ಚಿತ್ರಿಸಲಾಗಿದೆ. ಮತ್ತೊಂದು ಚಿತ್ರದಲ್ಲಿ ಕುದುರೆ ಸವಾರನು ಒಂದುಕೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿದ್ದು ಬಲಗೈಯನ್ನು ಮೇಲಕ್ಕೆ ಎತ್ತಿದ್ದಾನೆ. ಮತ್ತೊಂದು ಚಿತ್ರದಲ್ಲಿ ಯಾವುದೋ ಪ್ರಾಣಿಯನ್ನು ಬೇಟೆಯಾಡುತ್ತಿರುವ ಚಿತ್ರವಿದ್ದು ಸುಮಾರು 8–10ಜನ ಬೇಟೆಗಾರರು ಬಾಣವನ್ನು ಹೂಡಿದ್ದು ಬೇಟೆಯಲ್ಲಿ ತೊಡಗಿರುವಂತೆ ಚಿತ್ರಿಸಲಾಗಿದೆ.

**ಚುಕ್ಕನಕಲ್ಲು** ಗ್ರಾಮವು ಕೊಪ್ಪಳ ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ ಸುಮಾರು 4 ಕಿ.ಮೀ ದೂರದಲ್ಲಿದೆ. ಗ್ರಾಮದ ದಕ್ಷಿಣಕ್ಕಿರುವ ಗುಡ್ಡವು ನೆಲಮಟ್ಟದಿಂದ ಸುಮಾರು 80 ಅಡಿಗಳಷ್ಟು ಎತ್ತರವಾಗಿರುವ ಆದಿಮಾನವನ ವಾಸಸ್ಥಾನವಾಗಿದೆ. ಈ ಬೆಟ್ಟದ ನೈರುತ್ಯ ಭಾಗದಲ್ಲಿರುವ ಎತ್ತರವಾದ ಬಂಡೆಯ ಮೇಲೆ ಕಲ್ಲಿನಿಂದ ಕುಟ್ಟಿ ಮೂಡಿಸಿರುವ ಚುಕ್ಕೆಗಳ ಚಿತ್ರಗಳಿದ್ದು ಸುಮಾರು ಒಂದರಿಂದ ಒಂದುವರೆ ಅಡಿಗಳಷ್ಟು ವಿಸ್ತೀರ್ಣವಾಗಿವೆ. ಬಂಡೆಯ ಮೇಲೆ ಈ ರೀತಿಯಾದ ಕುಟ್ಟುಚಿತ್ರಗಳಿರುವುದರಿಂದ ಈ ಗ್ರಾಮಕ್ಕೆ ಚುಕ್ಕನಕಲ್ಲು ಎಂದು ಹೆಸರುಬಂದಿದೆ. ಈ ನೆಲೆಯ ಪ್ರದೇಶದಲ್ಲಿ ನವಶಿಲಾಯುಗದ ಕಲ್ಲಿನ ಕೈಕೊಡಲಿಯೊಂದು ದೊರೆತಿದ್ದು ಸುಮಾರು ಎರಡು ಇಂಚು ಅಗಲ ಮತ್ತು ಮೂರುವರೆ ಇಂಚುಗಳಷ್ಟು ಉದ್ದವಾಗಿದೆ. ಇದು ಕಪ್ಪುಶಿಲೆಯಿಂದ ತಯಾರಿಸಲಾಗಿದೆ. ಅಲ್ಲದೆ ನವಶಿಲಾಯುಗದಲ್ಲಿ ಬಳಕೆಯಲ್ಲಿದ್ದ ವಿವಿಧ ಗಾತ್ರದ ಕವಣೆಕಲ್ಲುಗಳು ಸಹ ಇಲ್ಲಿ ದೊರೆತಿವೆ. ಈ ಕವಣೆಕಲ್ಲುಗಳು ನವಶಿಲಾಯುಗದ ಕಾಲದಲ್ಲಿ ಬೇಟೆಯಾಡಲು ಬಳಸಲಾಗುತ್ತಿತ್ತು. ಅಲ್ಲದೆ ಇದೇ ನೆಲೆಯಲ್ಲಿ ಬೃಹತ್ ಶಿಲಾಯುಗದ ಕಬ್ಬಿಣದ ಬಾಣದ ಮೊನೆಯು ದೊರೆತಿದೆ. ಇದು ಸುಮಾರು ಮೂರುವರೆ ಸೆಂಟಿಮೀಟರ್ ಉದ್ದ ಹಾಗೂ ಒಂದುವರೆ ಸೆಂಟಿಮೀಟರ್ ಅಗಲವಾಗಿದೆ. ಇಲ್ಲಿ ಕೆಂಪು ಮತ್ತು ಕಪ್ಪುವರ್ಣದ ಮೃತ್ಪಾತ್ರೆಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಂಪುವರ್ಣದ ಮಡಿಕೆಗಳ ಮೇಲೆ ಕೆಸರನ್ನು ಲೇಪಿಸಲಾಗಿದ್ದು ಈ ಮಡಿಕೆಗಳನ್ನು ತಿಗರಿ ಚಕ್ರದ ಮೇಲೆ ತಿರುಗುವಾಗಲೇ ಅದಕ್ಕೆ ಸಣ್ಣನಾರಿನಂತಹ ವಸ್ತುವಿನಿಂದ ವೃತ್ತಾಕಾರದ ಗೆರೆಗಳು ಮೂಡುವಂತೆ ಮಾಡಲಾಗಿದೆ. ಕೆಲವೊಂದು ಮಡಿಕೆಗಳು ತೆಳುವಾಗಿ ರಚನೆಯಾಗಿದ್ದು ಲೋಹದಂತೆ ಕಠಿಣತೆಯನ್ನು ಹೊಂದಿವೆ. ಈ ನೆಲೆಯ ಪಶ್ಚಿಮ ದಿಕ್ಕಿಗಿರುವ ಬಂಡೆಯ ಕಲ್ಲಾಸರೆಯಲ್ಲಿ ವರ್ಣಚಿತ್ರಗಳನ್ನು ರಚಿಸಿದ್ದು ವಾತಾವರಣದ ಪ್ರಭಾವದಿಂದ ಎಲ್ಲಾ ಚಿತ್ರಗಳು ಸಂಪೂರ್ಣವಾಗಿ ನಶಿಸಿದ್ದು ಬೇಟೆಯಾಡುತ್ತಿರುವ ಒಂದು ಚಿತ್ರ ಮಾತ್ರ ಸ್ವಲ್ಪ ಮಸುಕಾಗಿ ಕಾಣಿಸುತ್ತಿದೆ. ಇನ್ನುಳಿದಂತೆ ಈ ನೆಲೆಯು ಕಲ್ಲುಗಣಿಗಾರಿಗೆಯಿಂದ ಸಂಪೂರ್ಣವಾಗಿ ಹಾಳಾಗುತ್ತಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೊಪ್ಪಳ ಪರಿಸರವು ಇತಿಹಾಸ ಪೂರ್ವ ಮತ್ತು ಇತಿಹಾಸ ಕಾಲದ ನೂರಾರು ನೆಲೆಗಳನ್ನು ಹೊಂದಿದ್ದು ಅವುಗಳ ಬಗ್ಗೆ ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ.




ದನಕಲ್ ಗುಡ್ಡ ಮತ್ತು ವರ್ಣಚಿತ್ರ



ಹಿರೇಗುಡ್ಡದ ಒಂದು ನೋಟ



ಹಿರೇಗುಡ್ಡದ ಕಲ್ಲಾಸರೆಯ ವರ್ಣಚಿತ್ರಗಳು



ಹಿರೇಗುಡ್ಡದ ಕಲ್ಲಾಸರೆಯ ವರ್ಣಚಿತ್ರಗಳು

## ಕೊನೆ ಟಿಪ್ಪಣಿಗಳು

01. ಶರಣಬಸಪ್ಪ ಕೋಲ್ಕಾರ್., 2016., ಗಂಗಾವತಿ ತಾಲೂಕಿನ ನವಶೋಧಿತ ಬೃಹತ್ ಶಿಲಾಯುಗದ ನೆಲೆಗಳು ಮತ್ತು ಕಲ್ಗೊಂಬೆಗಳು., ಇತಿಹಾಸ ದರ್ಶನ – ಸಂಪುಟ 31., ಪುಟ 1.

02. ಶರಣಬಸಪ್ಪ ಕೋಲ್ಕಾರ್., 2010., ಶಿಲಾಯುಗದ ಗವಿಚಿತ್ರಗಳು., ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು ಗುಲಬರ್ಗಾ., ಪುಟ 32.

03. ನರಸಿಂಹನ್ ಅ.ಲ., 2010., ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳು., ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪುಟ 33.

04. ಉಪಿಂದರ್ ಸಿಂಗ್., 2015., ಎ ಹಿಸ್ಟರಿ ಆಫ್ ಏನ್ಸಿಯಂಟ್ ಅಂಡ್ ಅರ್ಲಿ ಮೆಡಿವಲ್ ಇಂಡಿಯಾ., ಪಿಯರ್ಸನ್ ಪಬ್ಲಿಕೇಷನ್ ಡೆಲ್ಲಿ., ಪುಟ 92–93

05. ಅದೇ., ಪುಟ 89

06. ಕೇಟ್ ಸ್ಯಾಂಟನ್., 2010., ಆರ್ಕಿಯಾಲಜಿ., ಪ್ಯಾರಗಾನ್ ಇಂಕ್ ಪಬ್ಲಿಕೇಷನ್ ಲಂಡನ್., 18–19